43 ಶಾಲೆಗಳಿಗೆ :43

4. ಮರದ ಹಲಗೆಗಳು 320 :320

ಆ ಒಟ್ಟು ಮೊತ್ತ ರೂ.1,57,890-00

ಇ ಇಲ್ಲ.

ಈ ಉದ್ಭವಿಸುವುದಿಲ್ಲ.

ವಿಷಯ:- ಬೆಂಗಳೂರು ನಗರದಲ್ಲಿರುವ ಖಾಸಗಿ ಅನುದಾನಿತ ಶಾಲಾ ಕಾಲೇಜುಗಳ ದಾಖಿಲಾತಿ ಅರ್ಜಿ ನಮೂನೆಗಳಿಗೆ ಅರ್ಜಿ ಶುಲ್ಕವನ್ನು ನಿಗದಿಪಡಿಸಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1505 (1574)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಬೆಂಗಳೂರು ನಗರದಲ್ಲಿರುವ ಖಾಸಗಿ ಅನುದಾನಿತ ಪ್ರಾಥಮಿಕ, ಪ್ರೌಢ ಮತ್ತು ಕಾಲೇಜುಗಳಲ್ಲಿ ದಾಖಿಲಾತಿ ಅರ್ಜಿ ನಮೂನೆಗಳಿಗೆ, ಅರ್ಜಿ ಶುಲ್ಕವನ್ನು ಸರ್ಕಾರವು ನಿಗಧಿಪಡಿಸಿದೆಯೇ ?

ಆ ಹಾಗಿದ್ದಲ್ಲಿ, ಗರಿಷ್ಟ ಅರ್ಜಿ ಶುಲ್ಕವೆಷ್ಟು ?

ಇ ಪ್ರತಿಯೊಂದು ಸಂಸ್ಥೆಯಲ್ಲಿ ಅತಿ ಹೆಚ್ಚಿನ ಅರ್ಜಿ ನಮೂನೆ ಶುಲ್ಕವನ್ನು ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ.ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು)-

ಅ ಬೆಂಗಳೂರು ನಗರದಲ್ಲಿ ಪದವಿ ಪೂರ್ವ ಶಿಕ್ಷಣದ ದಾಖಿಲಾತಿ ಅರ್ಜಿಗೆ ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿ ರೂ. 1/- ಅರ್ಜಿ ಶುಲ್ಕವನ್ನು ಸರ್ಕಾರವು ಆದೇಶ ಸಂಖ್ಯೆ: ಇಡಿ 91 ಪಿಟಿಯು72 ದಿನಾಂಕ 4-7-72ರಲ್ಲಿ ವಿಧಿಸಿದೆ. ಉಳಿದ ಪ್ರಾಥಮಿಕ, ಪ್ರೌಢ ಮತ್ತು ಪದವಿ ಕಾಲೇಜುಗಳಿಗೆ ಯಾವುದೇ ಪ್ರವೇಶ ಅರ್ಜಿ ಶುಲ್ಕ ವಿಧಿಸಿರುವುದಿಲ್ಲ.

ಆ ಸರ್ಕಾರವು ಆದೇಶ ಸಂಖ್ಯೆ : ಇಡಿ 91 ಪಿಟಿಯು 72 ದಿನಾಂಕ4-7-72ರಲ್ಲಿ ರೂ. 1/-ನ್ನು ಪ್ರವೇಶ ಅರ್ಜಿ ಶುಲ್ಕವನ್ನಾಗಿ ಖಾಸಗಿ ಪದವಿಪೂರ್ವ ಕಾಲೇಜುಗಳಲ್ಲಿ ವಿಧಿಸಲಾಗಿದೆ.

ಇ ಅತಿ ಹೆಚ್ಚಿನ ಶುಲ್ಕವನ್ನು ಸಂಸ್ಥೆಗಳು ವಸೂಲಿ ಮಾಡುತ್ತಿರುವ ಬಗ್ಗೆ ಸರ್ಕಾರಕ್ಕೆ ಯಾವುದೇ ದೂರು ಇದುವರೆಗೂ ಬಂದಿರುವುದಿಲ್ಲ.

ವಿಷಯ:- ಜಯನಗರ ಕ್ಷೇತ್ರದಲ್ಲಿರುವ ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ಬಗ್ಗೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1506 (1575)

ಶ್ರೀ ರಾಮಲಿಂಗ ರೆಡ್ಡಿ, (ಜಯನಗರ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಬೆಂಗಳೂರಿನ ಜಯನಗರ ವಿಧಾವ ಸಭಾ ಕ್ಷೇತ್ರದಲ್ಲಿನ ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಒಟ್ಟು ಪ್ರಾಥಮಿಕ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಒಟ್ಟು ಸಂಖ್ಯೆ.

ಆ ಈ ಸಂಸ್ಥೆಗಳ ಹೆಸರುಗಳನ್ನು ನೀಡುವುದು.

ಇ ಈ ಅನುದಾನಿತ ಶಾಲೆಗಳಲ್ಲಿ 1ನೇ ತರಗತಿ, 5ನೇ ತರಗತಿ ಮತ್ತು 8ನೇ ತರಗತಿಗಳಲ್ಲಿ ಲಭ್ಯವಿರುವ ಒಟ್ಟು ಸೀಟುಗಳ ಸಂಖ್ಯೆ (ಆಂಗ್ಲ ಮತ್ತು ಕನ್ನಡ ಮಾಧ್ಯಮಗಳೆರಡೂ)

ಈ ಪ್ರವೇಶ ನೀಡುವಾಗ ರೊಸ್ಟರ್ ಪದ್ಧತಿಯನ್ನು ಅನುಸರಿಸಲಾಗುತ್ತಿದೆಯೇ ?

ಉ ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಈ ಅನುದಾನಿತ ಸಂಸ್ಥೆಗಳಲ್ಲಿ 1ನೇ ತರಗತಿ ಮತ್ತು 8ನೇ